UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Monday
18-05-2026

ಪ್ರಕೃತಿಯ ಮಡಿಲಲ್ಲಿದೆ ಮೌನ ನೆಮ್ಮದಿ

● ಅಂಜಲಿ ಶ್ರೀನಿವಾಸ್

ಸಮುದ್ರದ ಅಲೆಗಳ ಮುಂದೆ ಕುಳಿತುಕೊಳ್ಳುವುದು ಪ್ರಕೃತಿಯ ಅತಿದೊಡ್ಡ ಅದ್ಭುತಗಳಲ್ಲಿ ಒಂದು. ಈ ಕ್ಷಣವು ಮನಸ್ಸಿಗೆ ಶಾಂತಿ, ಆಲೋಚನೆಗಳಿಗೆ ಆಳ ಮತ್ತು ಜೀವನದ ಕ್ಷಣಿಕತೆಯ ಅರಿವನ್ನು ನೀಡುತ್ತದೆ. ಸಮುದ್ರದ ಘರ್ಜಿಸುವ ಅಲೆಗಳು ಬಂಡೆಗಳಿಗೆ ಅಪ್ಪಳಿಸಿದಾಗ, ಪ್ರಕೃತಿಯ ಶಕ್ತಿಯನ್ನು ಪ್ರದರ್ಶಿಸುತ್ತದೆ. ಅಲೆಗಳು ದಡಕ್ಕೆ ಬಂದು ಪಾದಗಳನ್ನು ತೊಳೆಯುವಾಗ, ಪ್ರಶಾಂತತೆಯನ್ನು ನೀಡುತ್ತದೆ. ನಿರಂತರವಾಗಿ ಬಂದು ಹೋಗುವ ಅಲೆಗಳನ್ನು ನೋಡುವುದರಿಂದ ಮನಸ್ಸಿನ ಒತ್ತಡ ಕಡಿಮೆಯಾಗುವುದು. ಸಮುದ್ರದ ಅಲೆಗಳು ಯಾರಿಗೂ ಕಾಯುವುದಿಲ್ಲ. ಸಮುದ್ರ ತೀರದಲ್ಲಿ ನಿಂತಲ್ಲೆ ನಿಂತರೆ ನಿಧಾನವಾಗಿ ಕುಸಿಯುತ್ತ ಹೋಗುತ್ತೇವೆ. ಪ್ರಕೃತಿ ನಮಗೆ ಸಂದೇಶ ನೀಡುತ್ತದೆ. ನಿಂತಲ್ಲೇ ನಿಲ್ಲದಿರು ಎಂದು. ಈ ಗಾಳಿ ಬೆಳಕು ಜಲ ನೆಲ ಗಿಡ ಮರ ಮನುಕುಲಕ್ಕೆ ಅನೇಕ ಜೀವಿಗಳಿಗೆ ಆಶ್ರಯ ನೀಡಿ ಅದೆಷ್ಟು ಮೌನವಾಗಿದೆ. ಪ್ರಕೃತಿಗಿಲ್ಲದ ಭೇದ ಭಾವ ಮನುಷ್ಯನಲ್ಲಿ ಏಕಿದೆ?

Viswavani pg 11

Hosadiganta Pg 06

ಜೋಳದ ತೆನೆ, ಎಲೆ ಭಾಗದಲ್ಲಿ ಸರಣಿ ರಂಧ್ರ । ಗಿಡದ ಕಾಂಡ ಕೊರೆತದಿಂದ ಇಳುವರಿ ಕಡಿಮೆ

ಮುಸುಕಿನ ಜೋಳಕ್ಕೆ ಸೈನಿಕಹುಳು ಬಾಧೆ, ರೈತರಿಗೆ ನಷ್ಟ

▸ ತಾವರೆಕೆರೆ ಟಿ.ನಾಗರಾಜ್

ತಾವರೆಕೆರೆ: ಹೊಸಕೋಟೆ ತಾಲೂಕು ಮುಸುಕಿನ ಜೋಳ ಬೆಳೆ ಬೆಳೆದಿದ್ದು, ಬಿಸಿಲಿನ ತಾಪ ಹೆಚ್ಚಾಗಿ ಬೆಳೆ ಬೆಳೆಯಲು ಕುಂಟಿತವಾಗಿದ್ದು ಅದರಲ್ಲೂ ಅಲ್ಲಲ್ಲಿ ಸೈನಿಕ ಹುಳುವಿನ ಬಾಧೆ ಕಂಡು ಬಂದಿದ್ದು, ಮುಸುಕಿನ ಜೋಳ ಸುಮಾರಾಗಿ ಕಾಳು ಬರುವ ವೇಳೆಗೆ ಜೋಳದ ತೆನೆಯೊಳಗೆ ಸೇರಿ ಜೋಳವನ್ನೆಲ್ಲಾ ತಿಂದು ಎಲೆಯ ಭಾಗದಲ್ಲಿ ಸರಣಿ ರಂಧ್ರಗಳನ್ನು ಹಾಗೂ ಗಿಡದ ಕಾಂಡವನ್ನು ಕೊರೆಯುವುದರಿಂದ ಇಳುವರಿ ಕಡಿಮೆಯಾಗಿ ಇದರಿಂದ ರೈತರಿಗೆ ಅಪಾರವಾದ ನಷ್ಟ ಅನುಭವಿಸುವಂತಾಗಿದೆ.

ತಾವರೆಕೆರೆ ಗ್ರಾಮ ಪಂಚಾಯಿತಿಯ ಕಾಳಪ್ಪನಹಳ್ಳಿ ಗ್ರಾಮದ ರೈತ ಮಾರ್ಕೊಂಡಪ್ಪ 2 ಎಕರೆ ತೋಟದಲ್ಲಿ ಮುಸುಕಿನ ಜೋಳ ಬೆಳೆದಿದ್ದು. ಬಂಪರ್ ಬೆಳೆಯಾಗಿದ್ದು 1 ಕೆಜಿಗೆ 20ರಿಂದ 25ರೂ ದರಯಿದೆ. ಇದಿಂದ ಹಾಕಿದ ಬಂಡವಾಳಕ್ಕಿಂತ ಲಾಭ ಬರುತ್ತಿತ್ತು. ಇನ್ನೆನೂ ಸುಮಾರು ಒಂದು ತಿಂಗಳಲ್ಲಿ ಕೈ ಸೇರುವ ನೀರಿಕ್ಷೆಯಲ್ಲಿದ್ದು, ಅಷ್ಟರಲ್ಲಿ ಸೈನಿಕ ಹುಳುವಿನ ಕಾಟ ಅತಿ ಹೆಚ್ಚಾಗಿದ್ದು ಎಷ್ಟೇ ಔಷಧಿ ಸಿಂಪಡಿಸಿದರು ಸಾಯುತ್ತಿಲ್ಲ. ಸಾಲ ಮಾಡಿ ಬೆಳೆ ಬೆಳೆದಿದ್ದು ಕೈಗೆ ಬಂದತುತ್ತು ಬಾಯಿಗೆ ಬರದಂತಾಗಿದೆ. ಈ ರೀತಿಯಾದರೆ ಹಾಕಿದ ಬಂಡವಾಳ ಬರದೆ





ಸಾಲಗಾರನಾಗ ಬೇಕಾಗುತ್ತದೆ. ಬೆಳಗಿನ ಜಾವ ಅಥವಾ ಸಂಜೆಯ ಸಮಯದಲ್ಲಿ ಹುಳುಗಳು ಹೆಚ್ಚು ಕ್ರೀಯಾಶೀಲವಾಗಿರುವುದರಿಂದ ಬೆಳ್ಳಗ್ಗೆ ಅಪಾರ ನಷ್ಟ ಉಂಟಾಗುತ್ತಿದೆ. ಯಾವೊಬ್ಬ ಕೃಷಿ ಅಧಿಕಾರಿಯೂ ರೈತರ ತೋಟಗಳ ಬಳಿ ಬರುತ್ತಿಲ್ಲ.

ಸೈನಿಕ ಹುಳುವಿನ ಪ್ರೌಢಚಿಟ್ಟೆಯೂ ಎಲೆಗಳ ಕೆಳಭಾಗದಲ್ಲಿ ಸಾವಿರಾರು ಮೊಟ್ಟೆಗಳನ್ನು ಇಡುತ್ತದೆ. ಮರಿಗಳು ಹೊರ ಬಂದ ನಂತರ ಎಲೆಯನ್ನು ತಿನ್ನುವುದರಿಂದಗಿಡದ ಬೆಳೆವಣಿಗೆ ಕುಂಟಿತವಾಗುತ್ತದೆ. ನಂತರಗಿಡದ ಸುಳಿಯನ್ನು ಕೊರೆಯುತ್ತದೆಇದರಿಂದಗರಿಯಲ್ಲಿ ರಂಧ್ರಗಳು ಕಂಡು ಬರುತ್ತದೆ. ನಂತರ ಮುಸುಕಿನ ಜೋಳದಲ್ಲಿ ಸೇರಿ ಜೋಳ ತೆನೆಯೆಲ್ಲಾ ರಂಧ್ರಗಳಾಗಿ ಕೊರೆದುತೆನೆ ನಾಶ ಮಾಡುತ್ತದೆ.

ಲಾಭದ ನೀರಿಕ್ಷೆಯಲ್ಲಿದ್ದ ರೈತರಿಗೆ ಸೈನಿಕ ಹುಳುವಿನ ಬಾಧೆಯಿಂದತುಂಬಲಾರದ ನಷ್ಟ ಅನುಭವಿಸುವಂತಾಗಿದೆ. ಎಷ್ಟೇ ಔಷಧಿ ಸಿಂಪಡಣೆ ಮಾಡಿದರು ಸಾಯುತ್ತಿಲ್ಲ. ಕೀಟ ನಾಶಕಗಳನ್ನ ಬದಲಾಯಿಸಿ ಸಿಂಪಡಿಸಿದರು ಸಾಯುತ್ತಿಲ್ಲ. ಬೇರೆ ಏನೂ ಮಾಡುವುದೆಂದು ದಿಕ್ಕು ದೋಚದಾಗಿದೆ. ಬೇರೆ ರೀತಿಯಾಗಿ ಸೈನಿಕ ಹುಳು ಸಾಯಲು ಸೂಕ್ತ ಸಲಹೆ ಕೇಳಲು ಯಾವೊಬ್ಬ ಕೃಷಿ ಅಧಿಕಾರಿಗಳು ಇತ್ತ ಸುಳಿಯುತ್ತಿಲ್ಲ ಎಂದು ಅಳಲು ತೊಡಿಕೊಂಡ ರೈತ ಮಾರ್ಕೊಂಡಪ್ಪ ಕಾಳಪ್ಪನಹಳ್ಳಿ.

ಸೈನಿಕ ಹುಳು ಬಾಧೆ ಮುಸುಕಿನ ಜೋಳಕ್ಕೆ ಬಂದಿರುವುದು ನಮ್ಮ ಗಮನಕ್ಕೆ ಬಂದಿದೆ. ರೈತರುತಮ್ಮ ತೋಟಗಳಲ್ಲಿ ಕೀಟ ಬಾಧೆ ಕಾಣಿಸಿದ ತಕ್ಷಣ ನಮ್ಮಕಛೇರಿಗೆ ತಿಳಿಸಿದರೆ ಅದಕ್ಕೆ ಸೂಕ್ತ ಸಲಹೆ ನೀಡಲಾಗುವುದು. ಇಲ್ಲದಿದ್ದರೆ ಕೀಟವನ್ನು ಹತೋಟಿಗೆ ತರಲು ಮುಸುಕಿನ ಜೋಳ ಬಿತ್ತನೆಯಾದ 15-20 ದಿನಗಳ ಮೊದಲೆ ಮುಂಜಾಗ್ರತೆಯಾಗಿಒಂದು ಲೀಟರ್ ನೀರಿಗೆ 5 ಮೀಲಿ ಲೀಟರ್‌ಅಜಾಡಿರೆಕ್ಟಿನ್(ಬೇವಿನ ಮೂಲದ ಕೀಟ ನಾಶಕ) ಬೇರೆಸಿ ಸಿಂಪಡಿಬೇಕು. ಇದರಿಂದ ಸೈನಿಕ ಹುಳುವಿನ ಬಾಧೆ ನಿಯಂತ್ರಿಸಬಹುದು ಎಂದು ತಾಲೂಕು ಕೃಷಿ ಅಧಿಕಾರಿ ರೇಣುಕಾ ಪ್ರಸಾದ್ ಹೇಳಿದರು.

ಕೃಷಿ ಪ್ರಾಯೋಗಿಕ ಪರೀಕ್ಷೆಯಲ್ಲಿ ಭಾರೀ ಅಕ್ರಮ: ಬಿಜೆಪಿ ಆರೋಪ

Udayavani pg 02

ಗದಗ: ಚಿತ್ರದುರ್ಗ ಜಿಲ್ಲೆ ಹಿರಿಯೂರಿನ ತೋಟಗಾರಿಕೆ ಕಾಲೇಜು ಕೇಂದ್ರದಲ್ಲಿ ನಡೆದ ಕೆಸಿಇಟಿ ಕೃಷಿ ಪ್ರಾಯೋಗಿಕ ಪರೀಕ್ಷೆಯಲ್ಲಿ ಭಾರೀ ಅಕ್ರಮ ನಡೆದಿದ್ದು ರಾಜ್ಯ ಸರ್ಕಾರ ಕೂಡಲೇ ತನಿಖೆ ನಡೆಸಬೇಕು ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ್ ಒತ್ತಾಯಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ಈ ಕೇಂದ್ರದಲ್ಲಿ ನಡೆದ ಪ್ರಾಯೋಗಿಕ ಪರೀಕ್ಷೆಯಲ್ಲಿ ಫಲಿತಾಂಶ ಶೇ.70ರಷ್ಟು ಇದ್ದರೆ, ರಾಜ್ಯದ ಉಳಿದ 16 ಕೇಂದ್ರಗಳ ಫಲಿತಾಂಶ ಶೇ.30ರಷ್ಟು ಇದೆ. ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿಗೆ ಸೇರುವ ಹಿರಿಯೂರು ಕಾಲೇಜು ಕೇಂದ್ರದಲ್ಲಿ ಪರೀಕ್ಷೆ ಬರೆದ 2143 ವಿದ್ಯಾರ್ಥಿಗಳಲ್ಲಿ 74 ಮಂದಿ 200ಕ್ಕೆ 200 ಅಂಕ ಪಡೆದಿದ್ದಾರೆ. ಆದರೆ, ರಾಜ್ಯದ ಉಳಿದ 16 ಕೇಂದ್ರಗಳಲ್ಲಿ ಪರೀಕ್ಷೆ ಬರೆದ 22211 ವಿದ್ಯಾರ್ಥಿಗಳಲ್ಲಿ ಕೇವಲ 21 ವಿದ್ಯಾರ್ಥಿಗಳು 200ಕ್ಕೆ 200 ಅಂಕ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ. ಕೂಡಲೇ ಈ ಫಲಿತಾಂಶವನ್ನು ರದ್ದುಗೊಳಿಸಿ ಅಕ್ರಮದ ತನಿಖೆ ಕೈಗೊಂಡು ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

Viswavani pg 11



ಕೃಷಿ ಸಂಸ್ಕೃತಿಯ ಪ್ರತೀಕ ಹಕ್ಕೆಮನೆ

● ಹೊಸ್ಕನೆ ಮುತ್ತು

ಭಾರತೀಯ ಕೃಷಿ ಪದ್ಧತಿಯಲ್ಲಿ ರೈತನ ಕಾಯಕ ಕೇವಲ ಬತ್ತನೆ ಮಾಡುವುದಕ್ಷಷ್ಟೇ ಸೀಮಿತವಾಗಿಲ್ಲ; ಬೆಳೆ ಕೈಗೆ ಬರುವವರೆಗೂ ಅದನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾಗುತ್ತದೆ. ಮಲೆನಾಡಿನಲ್ಲಿ ಗದ್ದೆ-ತೋಟಗಳು ಕಾಡಿನ ಸೆರಗಲ್ಲೇ ಇರುವುದರಿಂದ ಕಾಡುಪ್ರಾಣಿಗಳ ಉಪಟಳ ಸರ್ವೇಸಾಮಾನ್ಯ. ಬೆಳೆ ರಕ್ಷಿಸಲು ರೈತ ಕಾವಲು ಕಾಯುವುದು ಅನಿವಾರ್ಯ. ಇಂಥಹ ಸಂದರ್ಭದಲ್ಲಿ ಅನ್ನದಾತನಿಗೆ ಆಸರೆಯಾಗಿ ನಿಲ್ಲುವ ರಚನೆಯೇ 'ಹಕ್ಕೆಮನೆ' ಅಥವಾ 'ಅಟ್ಟಣಿಗೆ'.

ಇದು ಪರಿಸರ ಸ್ನೇಹಿ ಕಾವಲು ಗೋಪುರ. ತುಸು ಎತ್ತರದ ಪ್ರದೇಶದಲ್ಲಿ ನಾಲ್ಕು ಗಟ್ಟಿಮುಟ್ಟಾದ ಕಂಬ ನೆಟ್ಟು, ಎಳೆಂಟು ಅಡಿ ವಿಸ್ತೀರ್ಣದ ಅಟ್ಟಣಿಗೆ ಸಿದ್ಧಪಡಿಸಲಾಗುತ್ತದೆ. ಒಳಗೆ ಕೂರಲು ಮತ್ತು ಮಲಗಲು ಅನುಕೂಲವಾಗುವಂತೆ ಅಡಿಕೆ ದಬ್ಬೆ ಇಲ್ಲಾ ಬಿದಿರಿನ ಬೊಂಬಿನ ನೆಲಹಾಸು. ಮೇಲ್ಛಾವಣಿಯಾಗಿ ಅಡಿಕೆ ಸೋಗೆ ಅಥವಾ ಒಣ ಹುಲ್ಲನ್ನು ಹೊದಿಸಿ, ಎತ್ತರಕ್ಕೆ ಹತ್ತಲು ಬಿದಿರಿನ ಏಣಿಯ ವ್ಯವಸ್ಥೆ. ಬಿಸಿಲು-ಮಳೆಯಿಂದ ರಕ್ಷಣೆ ಪಡೆಯಲು ಮತ್ತು ಮಧ್ಯಾಹ್ನದ ವಿಶ್ರಾಂತಿಗೆ ಇದು ಸುಂದರ ತಾಣ. ಗದ್ದೆಯಲ್ಲಿ ಬೆಳೆ ಹೇಗೆ ಬೆಳೆಯುತ್ತಿದೆ ಎಂಬುದನ್ನು ಒಂದೇ ಕಡೆ ನಿಂತು ವೀಕ್ಷಿಸಲು ವೇದಿಕೆ ನೆರವಾಗುತ್ತದೆ. ಅಟ್ಟಣಿಗೆಯ ಮೇಲೆ ನಿಂತರೆ ಸುತ್ತಮುತ್ತ ಸ್ಪಷ್ಟವಾಗಿ ಕಾಣಿಸುವುದರಿಂದ, ಯಾವುದೇ ಮೂಲೆಯಿಂದ ಪ್ರಾಣಿಗಳು ಬಂದರೂ ತಕ್ಷಣ ಗುರುತಿಸಬಹುದು. ರಾತ್ರಿಯ ವೇಳೆ 'ಹೊಡಚಲು' (ಬೆಂಕಿ) ಹಾಕಿಕೊಂಡು, ಡಬ್ಬು ಬಡಿಯುತ್ತಾ ಕಾಡುಮೃಗಗಳನ್ನು ಬೆದರಿಸುವ ರೈತನಿಗೆ ಇದು 'ಬೆಳೆ ಕಾಯುವ ಸೌಧ'ವೇ ಸರಿ.

ಮ್ಯಾಂಗೋ ಸಿಟಿ



ಮಾವಿನ ಸೀಸನ್ನಿನಲ್ಲಿ ನಮ್ಮ ರಾಮನಗರ, ಕೋಲಾರ, ಎಲ್ಲವ್ವೂ ಮಾವಿನ ಊರುಗಳಾಗಿಬಿಡುತ್ತವೆ. ಆದರೆ ನಿಜಕ್ಕೂ 'ಭಾರತದ ಮಾವಿನ ನಗರ' ಅಥವಾ 'ಮ್ಯಾಂಗೋ ಸಿಟಿ' ಎಂದು ಹೇಳುವುದು ಯಾವುದನ್ನು ಗೊತ್ತೆ? ಅದು ಪಶ್ಚಿಮ ಬಂಗಾಳದ ಮಾಲ್ಡಾ ನಗರ. ಗಂಗಾ ಮತ್ತು ಮಹಾನಂದಾ ನದಿಗಳ ನಡುವೆ ಇರುವ ಈ ಜಿಲ್ಲೆಯ ಮಣ್ಣು ಇದನ್ನು ಮಾವು ಬೆಳೆಯಲು ತಕ್ಕ ಫಲವತ್ತಾಗಿಸಿದೆ. ನೂರಾರು ತಳಿಯ ಮಾವು ಇಲ್ಲಿ ಬೆಳೆದು ದೇಶಾದ್ಯಂತ ರಫ್ತಾಗುತ್ತದೆ. ಫಸ್ಲಿ, ಹಿಮಸಾಗರ, ಲಂಗ್ರಾ, ಲಕ್ಷಣಬೋಗ್ ಮಾವುಗಳು ಇಲ್ಲಿ ಮೊಗಲರ ಕಾಲದಿಂದಲೂ ಬೆಳೆಯುತ್ತವೆ.

ಮಾವು, ದ್ರಾಕ್ಷಿ, ತರಕಾರಿ ಬೆಳೆಗಳಿಗೆ ಭಾರೀ ಹೊಡೆತ | ಬಿರು ಬಿಸಿಲಿಗೆ ಕಂಗಾಲಾದ ರೈತ ಸಮೂಹ

ಹವಾಮಾನ ವೈಪರೀತ್ಯಕ್ಕೆ ತತ್ತರಿಸಿದ ಕೃಷಿ

ಪ್ರದೀಪ್ ದೊಡ್ಡಬಳ್ಳಾಪುರ

ದಿಗಂತ ವಿಶೇಷ



ದೊಡ್ಡಬಳ್ಳಾಪುರ: ಬೆಂಗಳೂರು ಗ್ರಾಮಾಂತರ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಈ ಬಾರಿ ತೀವ್ರ ಬೇಸಿಗೆ ಮತ್ತು ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ಸಂಕಷ್ಟಕ್ಕೆ ಸಿಲುಕಿವೆ. ಈ ವರ್ಷದ ಪೂರ್ವ ಮುಂಗಾರು ಅವಧಿಯಲ್ಲಿ ಹವಾಮಾನದಲ್ಲಿ ಉಂಟಾದ ತೀವ್ರ ವ್ಯತ್ಯಾಸ ಹಾಗೂ ಎರುತ್ತಿರುವ ಬಿಸಲಿನ ಶಾಖದಿಂದ ರೈತರಲ್ಲಿ ಆತಂಕ ಮನೆ ಮಾಡಿದೆ

ಈ ಹಿಂದೆ ಬೇಸಿಗೆಯ ತಾಪಮಾನ ಕೇವಲ ವಾರ ಅಥವಾ ಹತ್ತು ದಿನಗಳ ಮಟ್ಟಿಗೆ ಮಾತ್ರ ಹೆಚ್ಚಾಗುತ್ತಿತ್ತು. ಆದರೆ ಈ ವರ್ಷ ಫೆಬ್ರವರಿಯಿಂದಲೇ ಉರಿ ಬೇಸಿಗೆ ಆರಂಭವಾಗಿದ್ದು, ಹಗಲಿನ ತಾಪಮಾನ 39 ಡಿಗ್ರಿ ಸೆಲ್ಸಿಯಸ್ ಗಡಿ ದಾಟುತ್ತಿದೆ. ರಾತ್ರಿ ಸಮಯದಲ್ಲೂ 27 ಡಿಗ್ರಿಗೂ ಹೆಚ್ಚು ತಾಪಮಾನ ದಾಖಲಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಕಡಿಮೆ ಆದ್ರತೆ ಮತ್ತು ಅಧಿಕ ತಾಪಮಾನದಿಂದ ಹವಾಮಾನ ವೈಪರಿತ್ಯ ಉಂಟಾಗಿ ಮಳೆ ಸಕಾಲಕ್ಕೆ ಬಾರದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಾವು ಬೆಳೆಗೆ ದೊಡ್ಡ ಹೊಡೆತ: ಈ ಬಾರಿಯ ಬಿಸಿಗಾಳಿ ಮತ್ತು ಉಷ್ಣಾಂಶದಿಂದ ಮಾವು ಬೆಳೆ ಹೆಚ್ಚು ಹಾನಿಗೊಳಗಾಗಿದೆ. ಫೆಬ್ರವರಿಯಲ್ಲಿ ಮಾವಿನ ಮರಗಳಲ್ಲಿ ಅಪಾರ ಪ್ರಮಾಣದಲ್ಲಿ ಹೂ ಬಿಟ್ಟಿದ್ದರೂ, ಹೆಚ್ಚಿನ ತಾಪಮಾನದಿಂದ ಹೂಗಳು ಕಾಯಿಯಾಗುವ ಪ್ರಕ್ರಿಯೆ ವಿಫಲವಾಗಿದೆ. ಪರಾಗಸ್ಪರ್ಶವಾದ ಬಳಿಕ ಕಾಯಿಯಾಗಬೇಕಿದ್ದ ಹೂಗಳು ಒಣಗಿ ಮಣಿನಲಿ ಬೆರೆತಿವೆ. ಉಳಿದಿರುವ ಕೆಲ ಕಾಯಿಗಳೂ ಸಹ ಸೂರ್ಯನ ತೀವ್ರ ಕಿರಣಗಳಿಗೆ ತುತ್ತಾಗಿ ಹಾನಿಗೊಳಗಾಗುತ್ತಿವೆ.

ಸಾಮಾನ್ಯವಾಗಿ 450 ಗ್ರಾಂ ತೂಕ ಬರಬೇಕಾದ ಬಾದಾಮಿ ಮಾವಿನಕಾಯಿ 300 ಗ್ರಾಂ ಕಡಿಮೆ ತೂಕ ಹೊಂದಿದ್ದು, 500 ಗ್ರಾಂ ಇರಬೇಕಾದ ಮಲ್ಲಿಕಾ ಮಾವು 400 ಗ್ರಾಂ ಸುತ್ತಮುತ್ತ ಮಾತ್ರ ತೂಕ ಇದೆ. ಹಣ್ಣಿನ ಗಾತ್ರ ಕಡಿಮೆಯಾಗುವುದರ ಜತೆಗೆ ಬಣ್ಣ ಮತ್ತು ರುಚಿಯಲ್ಲಿಯೂ ವ್ಯತ್ಯಾಸ ಕಂಡುಬರುತ್ತಿದೆ. ಇದರಿಂದ ಮಾರುಕಟ್ಟೆಯಲ್ಲಿ ಬೆಲೆ ಕುಸಿಯುವ ಸಾಧ್ಯತೆ ಹೆಚ್ಚಿದ್ದು, ಈಗಾಗಲೇ ಮಾರುಕಟ್ಟೆಯಲ್ಲಿ ಮಾವಿನ ಕೊರತೆಯಿಂದ ಮಾವು ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಭೀತಿ ಎದುರಾಗಿದೆ.

ದ್ರಾಕ್ಷಿ ಮತ್ತು ತರಕಾರಿ ಬೆಳೆಗಳಿಗೂ ಬಿಸಿ ಬಿಸಿ ಪೆಟ್ಟು: ವಾಣಿಜ್ಯ ತೋಟಗಾರಿಕೆ ಬೆಳೆ ದ್ರಾಕ್ಷಿಯ ಮೇಲೆ ತಾಪಮಾನ ಹೆಚ್ಚು ಪರಿಣಾಮ ಬೀರಿದೆ. ಈಗಾಗಲೇ ಬೆಳವಣಿಗೆಯ ಹಂತದಲ್ಲಿರುವ ದ್ರಾಕ್ಷಿ ಕಾಯಿಗಳು ಉರಿ ಬಿಸಿಲಿನಿಂದ ಕುಂಠಿತವಾಗುತ್ತಿವೆ. ಇಂತಹ ಸಂದರ್ಭದಲ್ಲಿ ದಿಢೀರ್ ಮಳೆ ಬಂದರೆ ಕಾಯಿಗಳಲ್ಲಿ ಒಡಕು ಉಂಟಾಗಿ ನೆಲಕ್ಕೆ ಬೀಳುವ ಸಾಧ್ಯತೆ ಹೆಚ್ಚಿದೆ. ದೀರ್ಘಾವಧಿಯ ತಾಪಮಾನದ ಒತ್ತಡದಿಂದ ಕೊಯ್ಲಿಗೆ ಬರುವ ಮುನ್ನವೇ ಕಾಯಿ ಹಾಳಾಗುತ್ತಿದೆ.

ಹೂಬೆಳೆ, ಅಡಿಕೆಗೂ ಸಂಕಷ್ಟ: ಅಧಿಕ ತಾಪಮಾನದಿಂದ ಗುಲಾಬಿ, ಸೇವಂತಿಗೆ ಸೇರಿದಂತೆ ಹೂಬೆಳೆಗಳ ಉತ್ಪಾದನೆಯೂ ಕುಸಿದಿದೆ. ಹೂಗಳ ತಾಜಾತನ ಮತ್ತು ಗುಣಮಟ್ಟ ಕಡಿಮೆಯಾಗಿದ್ದರೆ, ರೈತರಿಗೆ ನಷ್ಟದ ಭೀತಿ ಎದುರಾಗಿದೆ. ಇದೇ ರೀತಿ ಬಹುವಾರ್ಷಿಕ ಬೆಳೆಗಳಾದ ಅಡಿಕೆ ಗಿಡಗಳು ಬಿಸಿಲಿನ ತಾಪಕ್ಕೆ ನಲುಗುತ್ತಿವೆ. ಅಡಿಕೆ ಗರಿಗಳು ಒಣಗಿ ಹಳದಿ ಬಣ್ಣಕ್ಕೆ ತಿರುಗುತ್ತಿದ್ದವು,

ಕೊಳವೆ ಬಾವಿಯಲ್ಲಿ ನೀರಿನ ಅಭಾವ: ಮಳೆ ಕೊರತೆಯಿಂದ ಅಂತರ್ಜಲ ಮಟ್ಟ ಕುಸಿದಿದೆ, ಕೃಷಿ ಬೋರ್ವೆಲ್‌ಗಳಲ್ಲಿ ನೀರಿನ ಅಭಾವ ತೀವ್ರವಾಗಿದೆ. ನೀರಿನ ಕೊರತೆಯಿಂದ ಅನೇಕ ಪಂಪ್ ಸೆಟ್‌ಗಳು ಸ್ಥಗಿತಗೊಂಡಿವೆ. ಹಿಂದೆ ಎರಡು ತರಕಾರಿಗಳಲ್ಲಿ ತರಕಾರಿ ಬೆಳೆಯುತ್ತಿದ್ದ ರೈತರು ಈಗ ಅರ್ಧದಷ್ಟು ಬೆಳೆ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಬೀನ್ಸ್, ಟೊಮೆಟೊ, ಆಗಲಕಾಯಿ, ಹೀರೇಕಾಯಿ ಸೇರಿದಂತೆ ಹಲವು ತರಕಾರಿ ಬೆಳೆಗಳಲ್ಲಿ ಶೇ.40 ಇಳುವರಿ ಕುಸಿತ ಕಂಡುಬಂದಿದೆ

ಕೀಟಬಾಧೆ ಹೆಚ್ಚಿದೆ: ಒಣಹವೆಯಿಂದ ಬೆಳೆಗಳಲ್ಲಿ ಕೀಟಬಾಧೆ ಹೆಚ್ಚಾಗಿರುವುದು ರೈತರಿಗೆ ಮತ್ತೊಂದು ತಲೆನೋವಾಗಿದೆ. ಅಡಿಕೆ ಬೆಳೆಗಳಲ್ಲಿ ಕೆಂಪು ನುಸಿ ಕೀಟ, ಸುಳಿ ತಿಗಣೆ ಕಾಟ ಹೆಚ್ಚಾಗಿವೆ. ತರಕಾರಿ ಬೆಳೆಗಳಲ್ಲಿ ಟ್ರಿಪ್ಸ್, ಎಫಿಡ್ಸ್, ಮೀನಿ ಬ್ಯಾಗ್ಸ್ ಹಾಗೂ ಬಿಳಿ ಶಲ್ಕಗಳ ಹಾವಳಿ ಹೆಚ್ಚಿದ್ದು, ಬೆಳೆ ನಾಶವಾಗುತ್ತಿದೆ. ಮಾವಿನ ತೋಟಗಳಲ್ಲಿ ಹೂಜಿ ಕೀಟದ ದಾಳಿ ಹೆಚ್ಚಾಗಿದೆ.

ಹೈನುಗಾರಿಕೆಯ ಮೇಲೂ ಪರಿಣಾಮ: ಹವಾಮಾನ ವೈಪರಿತ್ಯ ಹೈನುಗಾರಿಕೆಯ ಮೇಲೂ ದುಷ್ಪರಿಣಾಮ ಬೀರಿದೆ. ಹಸಿ ಹುಲ್ಲಿನ ಕೊರತೆಯಿಂದ ಹಸುಗಳಿಗೆ ಸಮರ್ಪಕ ಮೇವು ಸಿಗುತ್ತಿಲ್ಲ. ಒಣ ಹುಲ್ಲಿನ ಅವಲಂಬನೆ ಹೆಚ್ಚಿದೆ ಹಾಲಿನ ಉತ್ಪಾದನೆ ಕುಸಿದಿದೆ. ಇದರಿಂದ ರೈತರು ಕೃಷಿಯ ಜತೆಗೆ ಹೈನುಗಾರಿಕೆಯಲ್ಲಿ ಸಹ ಸಂಕಷ್ಟ ಅನುಭವಿಸಿದ್ದಾರೆ. ಒಟ್ಟಾರೆ ಈ ವರ್ಷದ ಮಳೆ ಕೊರತೆ, ಉರಿ ಬಿಸಿಲು ಮತ್ತು ಹವಾಮಾನ ವೈಪರಿತ್ಯದಿಂದ ಕೃಷಿ ವಲಯ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಮುಂದಿನ ದಿನಗಳಲ್ಲಿ ಸರ್ಕಾರ ಹಾಗೂ ಕೃಷಿ ಇಲಾಖೆಯಿಂದ ಸೂಕ್ತ ನೆರವು ನೀಡುವಂತೆ ರೈತರು ಒತ್ತಾಯಿಸಿದ್ದಾರೆ.

> **ಸಾಲ ಮಾಡಿ 5 ಎಕರೆಯಲ್ಲಿ ದ್ರಾಕ್ಷಿ ಬೆಳೆದಿದ್ದೇವೆ. ತಾಪಮಾನ ಹೆಚ್ಚಾಗಿ ಕಾಯಿ ನೆಲಕ್ಕೆ ಬಿದ್ದಿವೆ. ಫಸಲು ಕೈಗೆ ಸಿಗುತ್ತಿಲ್ಲ. ಇರೋ ಹಣ್ಣಿಗೆ ಇಳುವರಿ ಬರುತ್ತಿಲ್ಲ, ಸಾಲಗಾರರ ಮನೆ ಬಳಿ ಬರುತ್ತಿದ್ದಾರೆ. ನಮಗೆ ದಿಕ್ಕೇ ತೋಚದಂತೆ ಆಗಿದೆ.**
> ■ ರಾಜಣ್ಣ ತೂಬಗೆರೆ

> **ಸೂಪರ್ ಎಲಿನಿನೋ ಪರಿಣಾಮದಿಂದ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಶೇ.30ರಷ್ಟು ಮಳೆ ಕೊರತೆ ಕಂಡುಬಂದಿದ್ದು, ಇದರ ನೇರ ಪರಿಣಾಮ ಈಗ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಮೇಲೆ ಬೀಳುತ್ತಿದೆ.**
> ■ ಡಾ.ಬಿ.ಜಿ. ಹನುಮಂತರಾಯ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ

Hosadiganta Pg 06

Prajavani Pg 10

ಮಲೆನಾಡಿನ ಮಣ್ಣಿಗೆ 'ಹಿಂಡುವ ಕೃಷಿ' ಕುತ್ತು

'ಸಂಚಾರಿ ಗುತ್ತಿಗೆ ಕೃಷಿ' ಪದ್ಧತಿಯಲ್ಲಿ ಅಳತೆಮೀರಿ ಒಳಸುರಿಗಳ ಬಳಕೆ ಆಗುತ್ತಿದೆ. ಇದರ ಫಲವಾಗಿ ಮಣ್ಣಿನ ಜೀವಂತಿಕೆ ನಷ್ಟವಾಗುತ್ತಿದೆ, ಪರಿಸರ ಗಾಸಿಗೊಳ್ಳುತ್ತಿದೆ.

ಪ್ರೊ. ಎ.ಎನ್. ಗಣೇಶಮೂರ್ತಿ

ನೈರುತ್ಯ ಮುಂಗಾರು ಕರ್ನಾಟಕದಲ್ಲಿ ಕೃಷಿ ಚಟುವಟಿಕೆಗಳಿಗೆ ಪುನಶ್ಚೇತನ ನೀಡುವ ಕಾಲ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಮಲೆನಾಡು ಸೇರಿದಂತೆ ದಕ್ಷಿಣ ಭಾರತದ ಹಲವೆಡೆ ಇದೇ ಅವಧಿಯಲ್ಲಿ 'ಸಂಚಾರಿ ಗುತ್ತಿಗೆ ಕೃಷಿ' ಎಂಬ ಆತಂಕಕಾರಿ ವಿದ್ಯಮಾನ ಆರಂಭವಾಗುತ್ತಿದೆ. ಸಣ್ಣ ಹಿಡುವಳಿದಾರರಿಂದ ಭೂಮಿಯನ್ನು ಅಲ್ಪಾವಧಿಗೆ ಗುತ್ತಿಗೆ ಪಡೆಯುವ ಕೆಲವು ಕೃಷಿಕರು, ಅತಿ ಕಡಿಮೆ ಸಮಯದಲ್ಲಿ ಹೆಚ್ಚಿನ ಲಾಭ ಗಳಿಸಲು ಮಣ್ಣಿಗೆ ವಿಪರೀತ ರಾಸಾಯನಿಕಗಳನ್ನು ಸುರಿದು ಅಕ್ಷರಶಃ ಆಕ್ರಮಣ ನಡೆಸುತ್ತಿದ್ದಾರೆ. ಇದು ಯಾವುದೋ ಒಂದು ಊರಿನ ವಿದ್ಯಮಾನ ಅಥವಾ ಸಣ್ಣ ಸಮಸ್ಯೆ ಅಲ್ಲ. ಮಣ್ಣಿನ ಸತ್ತ್ವವನ್ನೇ ಹೀರುವ 'ಹಿಂಡುವ ಕೃಷಿ'ಯ (Extractive Agriculture) ಹೊಸ ಮಾದರಿ. ಕಟಾವಿನ ನಂತರ ಗುತ್ತಿಗೆದಾರರು ಬಿಟ್ಟು ಹೋಗುವ ಭೂಮಿಗೆ ಸತ್ತ್ವವೇ ಇರುವುದಿಲ್ಲ. ಮಾಲೀಕರ ಭವಿಷ್ಯವೇ ಅನಿಶ್ಚಿತವಾಗಿರುತ್ತದೆ.

ಅಲ್ಪಾವಧಿ ಗುತ್ತಿಗೆ ಕೃಷಿಯ ಈ ಮಾದರಿಯಲ್ಲಿ ಶುಂಠಿ, ಅರಿಸಿನ ಹಾಗೂ ತರಕಾರಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಉದಾಹರಣೆಗೆ, ಶುಂಠಿ ಬೆಳೆಗೆ ಹೆಕ್ಟೇರ್‌ಗೆ 10ರಿಂದ 12 ಲಕ್ಷ ರೂಪಾಯಿ ಹೂಡಿಕೆ ಬೇಕಾಗುತ್ತದೆ. ಈ ಬಂಡವಾಳದ ಮೇಲೆ ಖಚಿತ ಲಾಭ ಪಡೆಯಲು ಗುತ್ತಿಗೆದಾರರು ಮಿತಿ ಮೀರಿದ ಗೊಬ್ಬರ, ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳನ್ನು ಬಳಸುತ್ತಾರೆ. ಮಣ್ಣಿನ ಆರೋಗ್ಯ ಕಾಪಾಡುವ ಕಾಳಜಿಯು ಅವರ ಆದ್ಯತೆ ಆಗಿರುವುದಿಲ್ಲ. ಬೆಳೆ ಕೊಯ್ಲು ಮುಗಿಸಿದ ಮೇಲೆ ಲಾಭದೊಂದಿಗೆ ಇವರು ನಿರ್ಗಮಿಸಿದಾಗ, ನಿಸ್ತೇಜ ಮಣ್ಣು ಹಿಂದೆ ಉಳಿಯುತ್ತದೆ. ಅತಿಯಾದ ರಾಸಾಯನಿಕ ಬಳಕೆಯಿಂದ ಮಣ್ಣಿನಲ್ಲಿರುವ ಸಾವಯವ ಅಂಶ ಕುಸಿಯುತ್ತದೆ, ಸೂಕ್ಷ್ಮಾಣುಗಳು ನಾಶ ಆಗುತ್ತವೆ ಮತ್ತು ಮಣ್ಣಿನ ಪಿಎಚ್ ಸಾರ ಅಸ್ತವ್ಯಸ್ತಗೊಳ್ಳುತ್ತದೆ. ಪಶ್ಚಿಮ ಘಟ್ಟಗಳಂತಹ ಅಧಿಕ ಮಳೆಯ ಪ್ರದೇಶಗಳಲ್ಲಿ ಈ ರಾಸಾಯನಿಕಗಳು ಜಲಮೂಲಗಳನ್ನು ಸೇರಿ ಪರಿಸರ ಮಾಲಿನ್ಯಕ್ಕೂ ಕಾರಣವಾಗುತ್ತಿವೆ.

ಗುತ್ತಿಗೆದಾರರು ಹೋದ ಮೇಲೆ ಆ ಭೂಮಿಯಲ್ಲಿ ಮತ್ತೆ ಕೃಷಿ ಮಾಡಲು ಸಾಧ್ಯವಾಗದಷ್ಟು ಪ್ರಪ್ರಮಾಣದಲ್ಲಿ ಮಣ್ಣು ಬಂಜರಾಗಿರುತ್ತದೆ. ರೈತರಿಗೆ ಸಿಗುವ ತಕ್ಷಣದ ನಗದು ಹಣದ ಆಸೆ ಭೂಮಿಯ ದೀರ್ಘಕಾಲದ ಅವನತಿಗೆ ದಾರಿ ಆಗುತ್ತಿದೆ. ಅಲ್ಲದೆ, ಇಂತಹ ಪದ್ಧತಿಯಲ್ಲಿ ಬೆಳೆದ ಆಹಾರ ಪದಾರ್ಥಗಳಲ್ಲಿ ಅಪಾಯಕಾರಿ ರಾಸಾಯನಿಕ ಅವಶೇಷಗಳು ಉಳಿಯುತ್ತಿರುವುದು ಬಳಕೆದಾರರ ಆರೋಗ್ಯದ ದೃಷ್ಟಿಯಿಂದಲೂ ಆತಂಕಕಾರಿ.



ಭೂಮಿಯ ಶೋಷಣೆಗೆ ಬರೀ ರೈತರನ್ನು ದೂಷಿಸಿ ಪ್ರಯೋಜನವಿಲ್ಲ. ಕೃಷಿ ವಿಸ್ತರಣಾ ಸೇವೆಗಳ ಕೊರತೆ ಮತ್ತು ಮಾರುಕಟ್ಟೆಯ ತಂತ್ರಗಳು ರೈತರನ್ನು ಇತ್ತ ತಳ್ಳುತ್ತಿವೆ.

ವಾಸ್ತವವಾಗಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮಣ್ಣಿನ ಪುನಶ್ಚೇತನಕ್ಕೆ ಪೂರಕವಾದ ಜೈವಿಕ ವಿಧಾನಗಳನ್ನು ಅಭಿವೃದ್ಧಿಪಡಿಸಿದೆ. ಆದರೆ, ಇವುಗಳ ಬಗ್ಗೆ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಈ ಗಂಭೀರ ಸಮಸ್ಯೆಯ ನಿಯಂತ್ರಣಕ್ಕೆ ಸರ್ಕಾರ ಮತ್ತು ನೀತಿ ನಿರೂಪಕರು ತುರ್ತಾಗಿ ಗಮನ ಹರಿಸಬೇಕಿದೆ.

ಭೂಮಿಯನ್ನು 'ಹಿಂಡುವ ಕೃಷಿ'ಗೆ ಸಂಬಂಧಿಸಿದಂತೆ ಕೆಲವು ಪರಿಹಾರದ ಹಾದಿಗಳೂ ಇವೆ. ಕೃಷಿ ಭೂಮಿಯ ಗುತ್ತಿಗೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಕಡ್ಡಾಯ ನೋಂದಣಿ ವ್ಯವಸ್ಥೆ ಜಾರಿಗೆ ಬರಬೇಕಾಗಿದೆ. ಗುತ್ತಿಗೆ ಅವಧಿ ಮುಗಿದ ನಂತರ ಮಣ್ಣಿನ ಸ್ಥಿತಿಯನ್ನು ಆಧರಿಸಿ ಹಿಂತಿರುಗಿಸುವ 'ಠೇವಣಿ ವ್ಯವಸ್ಥೆ' ಅಥವಾ ಕಡ್ಡಾಯ ಮಣ್ಣು ಪರೀಕ್ಷೆಯ ನಿಯಮ ರೂಪಿಸಬೇಕು. ಈ ನಿಟ್ಟಿನಲ್ಲಿ ನೀತಿ ನಿರೂಪಕರು (ಸಚಿವಾಲಯ, ಅಧಿಕಾರಿಗಳು ಮತ್ತು ಸಂಶೋಧನಾ ಸಂಸ್ಥೆಗಳು) ಸಕ್ರಿಯ ಪಾತ್ರ ನಿರ್ವಹಿಸಬೇಕು.

ಅವಶೇಷಗಳ ಮೇಲ್ವಿಚಾರಣೆ ಅತ್ಯಗತ್ಯ. ಗುತ್ತಿಗೆ ಭೂಮಿಯಲ್ಲಿ ಬೆಳೆದ ಬೆಳೆಗಳ ಗುಣಮಟ್ಟ ಮತ್ತು ರಾಸಾಯನಿಕ ಅಂಶಗಳ ತಪಾಸಣೆ ಕಟ್ಟುನಿಟ್ಟಾಗಿ ನಡೆಯಬೇಕು. ಬೆಳೆಗೆ ಬಳಕೆಯಾಗುವ ಒಳಸುರಿಗಳ ನಿಯಂತ್ರಣದ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು. ಸಣ್ಣ ರೈತರಿಗೆ ತಾತ್ಕಾಲಿಕ ಲಾಭಕ್ಕಿಂತ ಮಣ್ಣಿನ ಸುಸ್ಥಿರತೆ ಅತ್ಯಂತ ಮುಖ್ಯ ಎಂಬುದನ್ನು ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಮನವರಿಕೆ ಮಾಡಿಕೊಡುವ ಪ್ರಯತ್ನಗಳು ವ್ಯಾಪಕ ಆಗಬೇಕು.

ಗುತ್ತಿಗೆಗೆ ಭೂಮಿ ಪಡೆದವರು ಬೆಳೆಗಳಿಗೆ ಬಳಸುವ ಗೊಬ್ಬರ, ಕೀಟನಾಶಕಗಳ ವಿಚಾರದಲ್ಲಿ ಸರಿಯಾದ ಮೇಲ್ವಿಚಾರಣೆ ಬೇಕು. ಮಣ್ಣು ಎನ್ನುವುದು ಜಡ ವಸ್ತುವಲ್ಲ; ಅದೊಂದು ಜೀವಂತ ವ್ಯವಸ್ಥೆ. ಒಮ್ಮೆ ಅದರ ಫಲವತ್ತತೆ ನಾಶವಾದರೆ, ಮರಳಿ ಪಡೆಯುವುದು ದುಬಾರಿ ಮತ್ತು ಕಷ್ಟಸಾಧ್ಯ. ತಾತ್ಕಾಲಿಕ ಆರ್ಥಿಕ ಲಾಭಕ್ಕಾಗಿ ಮಣ್ಣನ್ನು ಬಲಿಕೊಡುವುದು ಆಹಾರ ಭದ್ರತೆಗೆ ಮಾಡುವ ದ್ರೋಹ.

ಮಳೆಗಾಲವು ಮಣ್ಣಿಗೆ ಹೊಸ ಜೀವ ನೀಡುವ ಅಮೃತ ಕಾಲ. ಈ ಸಮಯದಲ್ಲಿ ಭೂಮಿಗೆ ಜೀವಂತಿಕೆ ಊಡಿಸಬೇಕೇ ಹೊರತು ವಿಷ ಉಣಿಸುವಂತಾಗಬಾರದು. ತಾತ್ಕಾಲಿಕ ಲಾಭಗಳು ಶಾಶ್ವತ ನಷ್ಟಗಳಿಗೆ ಮುನ್ನುಡಿ ಆಗಬಾರದು. ಅಂಥ ಭೀಕರ ಪರಿಸ್ಥಿತಿ ತಲೆದೋರುವ ಮೊದಲು ನಮ್ಮ ಕೃಷಿ ವ್ಯವಸ್ಥೆಯು ಎಚ್ಚತ್ತುಕೊಳ್ಳಬೇಕು. ಇಲ್ಲದಿದ್ದರೆ ಸುಸ್ಥಿರ ಕೃಷಿ ಎಂಬುದು ಬರೀ ಕನಸಾಗಿಯೇ ಉಳಿಯಬಹುದು.

ಅಲ್ಪಾವಧಿ ಗುತ್ತಿಗೆ ಕೃಷಿ ಕರ್ನಾಟಕ ಮಾತ್ರವಲ್ಲದೆ ದೇಶದ ಉಳಿದ ಭಾಗಗಳಲ್ಲೂ ಇರಬಹುದು. ಇಂಥ ಲಾಭಕೋರ ಮನಃಸ್ಥಿತಿಯ ಕೃಷಿಯನ್ನು ನಿಯಂತ್ರಿಸಲು ಸಮರ್ಪಕ ನಿಯಮಗಳು ರೂಪುಗೊಳ್ಳಬೇಕು.

ಲೇಖಕ: ಫೆಲೊ, ರಾಷ್ಟ್ರೀಯ ಕೃಷಿ ವಿಜ್ಞಾನ ಮತ್ತು ಭಾರತೀಯ ಮಣ್ಣು ವಿಜ್ಞಾನ ಮಂಡಳಿ